For More JobNews Visit: www.kpscvaani.com

**ಕರ್ನಾಟಕ ಲೋಕಸೇವಾ ಆಯೋಗ**

**ಆಯೋಗದ ಸ್ಪಷ್ಟೀಕರಣ**

2019-20ನೇ ಸಾಲಿನ ಸಹಾಯಕರು/ ಪ್ರಥಮ ದರ್ಜೆ ಸಹಾಯಕರು ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಆಯೋಗವು ದಿನಾಂಕ:09-09-2021ರಂದು ಅರ್ಹತಾ ಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುತ್ತದೆ. ಈ ಸಂಬಂಧ ದಿನಾಂಕ:12-09-2021ರಂದು ಈ ಕೆಳಕಂಡ ಪತ್ರಿಕೆಗಳಲ್ಲಿ ಅವುಗಳ ಮುಂದೆ ಸೂಚಿಸಿರುವ ಶೀರ್ಷಿಕೆಗಳಡಿ ಕೆಲವೊಂದು ಆರೋಪಗಳನ್ನು ಮಾಡಿ ಪ್ರಕಟಿಸಲಾಗಿರುತ್ತದೆ.

1. ವಿಜಯ ವಾಣಿ :- ಒಂದೇ ಸಮುದಾಯದ 70 ಮಂದಿಗೆ ಎಫ್‌ಡಿಎ ಅರ್ಹತೆ?
2. ಪ್ರಜಾವಾಣಿ :- ಎಫ್‌ಡಿಎ 1:3 ಪಟ್ಟಿ ಸುತ್ತ ಅನುಮಾನ!
3. ಕನ್ನಡ ಪ್ರಭ :- ಕೆಪಿಎಸ್ಸಿ: ಒಂದೇ ಜಾತಿಯ 70ಕ್ಕೂ ಹೆಚ್ಚು ಜನ ಆಯ್ಕೆ!

ಈ ಬಗ್ಗೆ ಆಯೋಗವು ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಿದೆ.

ಆಯೋಗವು ಫೆಬ್ರವರಿ ಮಾಹೆಯಲ್ಲಿ ರಾಜ್ಯದಾದ್ಯಂತ ನಡೆಸಲಾದ ಪರೀಕ್ಷೆಗಳಲ್ಲಿ ಸುಮಾರು 2,49,175 ಅಭ್ಯರ್ಥಿಗಳು ಪರೀಕ್ಷೆಗಳನ್ನು ಬರೆದಿರುತ್ತಾರೆ. ಆಯೋಗವು ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಹುದ್ದೆಗಳಿಗೆ 1:3 ಅನುಪಾತದಲ್ಲಿ ಹಾಗೂ ಕೆಲವೊಂದು ವರ್ಗಗಳಿಗೆ ಅಂದರೆ: ಅಂಗವಿಕಲ, ಯೋಜನಾ ನಿರಾಶ್ರಿತರು ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ 1:5ರ ಅನುಪಾತದಲ್ಲಿ ಅರ್ಹತಾ ಪಟ್ಟಿಯನ್ನು ದಿನಾಂಕ:09-09-2021ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಅರ್ಹತಾ ಪಟ್ಟಿಯ ಕುರಿತಂತೆ ದಿನಾಂಕ:12-09-2021ರಂದು ಪತ್ರಿಕೆಗಳಲ್ಲಿ ಪ್ರಕಟಿಸಿರುವ ಅಂಶಗಳಲ್ಲಿ ಒಂದೇ ಸಮುದಾಯದ 70 ಮಂದಿಗೆ ಎಫ್‌ಡಿಎ ಅರ್ಹತೆ, ಒಂದೇ ಕೇಂದ್ರದಲ್ಲಿ ಇವರೆಲ್ಲ ಪರೀಕ್ಷೆಗಳನ್ನು ಬರೆದು ಪಾಸಾಗಿರುತ್ತಾರೆ ಹಾಗೂ ನಕಲು ಮಾಡಿರುವ ಶಂಕೆ ಇದೆ ಎಂದು ನಮೂದಿಸಲಾಗಿರುತ್ತದೆ. ಆದರೆ ಸದರಿ ಅಂಶಗಳು ಸತ್ಯಕ್ಕೆ ದೂರವಾದ ಹಾಗೂ ಆಧಾರ ರಹಿತವಾದ ಅಂಶಗಳಾಗಿರುತ್ತವೆ. ಏಕೆಂದರೆ ಸದರಿ, ಅಭ್ಯರ್ಥಿಗಳು ವಿವಿಧ ಜಿಲ್ಲೆಗಳ ವಿವಿಧ ಪರೀಕ್ಷಾ ಉಪ ಕೇಂದ್ರಗಳ ವಿವಿಧ ಪರೀಕ್ಷಾ ಕೊಠಡಿಗಳಲ್ಲಿ ಪರೀಕ್ಷೆ ಬರೆದು, ನಿಯಮಾನುಸಾರ ವಿವಿಧ ಮೀಸಲಾತಿಯಡಿ ಅರ್ಹತಾ ಪಟ್ಟಿಯಲ್ಲಿ ಆಯ್ಕೆ ಹೊಂದಿದ್ದು, ಒಂದೇ ಸಮುದಾಯಕ್ಕೆ ಸೇರಿದ್ದಾರೆ ಹಾಗೂ ಒಂದೇ ಕೇಂದ್ರದಿಂದ ಪಾಸು ಆಗಿರುತ್ತಾರೆ ಎಂಬುದು ಸತ್ಯಕ್ಕೆ ದೂರವಾಗಿದೆ. ಅಲ್ಲದೇ, ಪ್ರಸ್ತುತ ಪ್ರಕಟಿಸಿರುವ ಪಟ್ಟಿಯು ಕೇವಲ ಅರ್ಹತಾ ಪಟ್ಟಿಯಾಗಿದ್ದು, ನೋಂದಣಿ ಸಂಖ್ಯೆ ಆಧಾರದ ಮೇಲೆ ಪಟ್ಟಿಯನ್ನು ಬಿಡುಗಡೆ ಮಾಡಲಾಗಿರುತ್ತದೆಯೇ ಹೊರತು ಜ್ಯೇಷ್ಠತಾ ಪಟ್ಟಿಯಾಗಿರುವುದಿಲ್ಲ.

14.9.2021

ಕಾರ್ಯದರ್ಶಿ

ಕರ್ನಾಟಕ ಲೋಕಸೇವಾ ಆಯೋಗ.